CALLING ATTENTION TO MATTERS OF URGENT PUBLIC IMPORTANCE

re : Damages to Bridges, Roads and Tanks in Shimoga District due to heavy rains.

SRI KADIDAL DIVAKAR (Thirthahalli).—Sir, I call the attention of the Minister for Public Works to the damages caused to bridges, roads, and tanks, in Shimoga District due to heavy rains ;

SRI S. BANGARAPPA (Minister for Public Works).—Sir, I wish to make the following statement :

I. RAINFALL.—During 1978, certain taluks in Shimoga District experienced heavy rainfall. The details of rainfall during 1977 and 1978 are as follows in respect of Thirthahalli Taluka.

	May, June & July of 1977	May, June & July of 1978.
Thirthahalli	876 mm.	1,692 mm.

Further, very heavy rainfall occurred on 12th and 13th July 1978 in Thirthahalli and Sagar Talukas. The intensity of rainfall being as follows :

Date	Thirthahalli	Sagar
12-7-1978	134 mm.	181 mm.
13-7-1978	108 mm.	66 mm.

This heavy rainfall resulted in floods in most of the streams in these two taluks.

II. DAMAGES (i) Roads & Bridges.—Due to the floods caused as a result of rainfall, damages occurred to bridges, culverts protective works, road surface etc. There was interruption to traffic on 12-7-1978 in respect of the following roads :

(i) Melige-Kulur road, Muthur Hobli, Thirthahalli Taluk.

(ii) Tudur-Kattehakkalu, Devangi-Bandigadi road, Muthur Hobli, Thirthahalli Taluk

(iii) Mile 217/1 of B. H. road, in Sagar Taluk.

(iv) Mile 32/8 of Kogar-Hirebhaskar road in Sagar Taluk.

The approach to bridges on Milege-Kulur road. Thirthahalli taluk was washed away on 12-7-1978. Immediately a temporary wooden foot bridges was constructed on 13-7-1978 to facilitate movement of pedestrain traffic. Further, the washed out portion of embankment has been filled up with boulders and light traffic has been allowed on

this road from 14-7-1978. The details of damages caused to the bridge could be correctly assessed after the floods subside. The bridge may need reconstruction also.

The bridge pier at Nenangihalla along Tudur-Kattehakkalu Devangi Bandigadi road, Thirthahalli Tq. has been washed away and there was one foot of water flowing over the bridge. Traffic is interrupted. After the floods recede, temporary arrangements will be made to support the deck slab and to restore at least light traffic, At present traffic is deviated at Devangi along Koppa-Thirthahalli road. The extra distance will be about 5 miles.

The left side return of bridge at 217/1 M of Bangalore-Honnavar road near Sagar has collapsed resulting in interruption to traffic. Temporary protective works have been effected and light traffic has been allowad from 15-7-1978. This bridge may need reconstruction.

The peir of bridge at 32/8 M of Kogar-Hirebhaskar road, Sagar Taluka has collapsed. Temporary protective works in progress and light traffic will be allowed after the work is completed.

In addition to the above, damages are caused to culverts, road surface and other protective works in respect of the following roads. However, traffic on these roads is not interrupted.

(*a*) Thirthahalli Taluk :

(i) Shimoga-Mangalore road.
(ii) Koppa-Thirthahalli road
(iii) Anandapuram-Thirthahalli road.
(iv) Araga Hosanagar Boundor road.

(*b*) Sagar Taluk :

(i) Kanle-Siddapur road.
(ii) Kaspadi-Thygarthi--Induvalli road.
(iii) Masur-Hosabale road.
(iv) Sagar-Keladi road.
(v) Keladi-Suntikoppa road.
(vi) Chikkanevur-Siruguppa link road.

(ii) M. I Works.—Thirty-one M. I. Works in Shimoga district (11 in Sagar Trluk, 6 in Sorab Taluk. 2 in Shikaripur Taluk and 12 in Thirthahally Taluk) have been damaged due to the floods. In almost all the cases precautionery measures have been taken to prevent further damages to the M. I. Works.

III. COST OF REPAIRS RECONSTRUCTION.—(i) Roads & Bridges : The damaged portion of the road surface/structure/ protective works are to be repaired/reconstructed depending upon the nature of situation or repair. The amount required for immediate restoration of the road is estimated as follows :

Thirthahalli Taluk	...	Rs. 5,38,000
Sagar Taluk	...	Rs. 4,16,090
Total	...	Rs. 9.54.090

(ii) M. I. Works.—The repair work will be taken up after the monsoon, The approximate amount required for immediate restoration of M. I. Works is estimated to be Rs. 4,11,000 (In respect of Thirthahally taluk Rs. 1,68,000)

IV. FUNDS.—(i) Roads & Bridges.—In the budget estimate for the year 1978-79, there is no specific provision for meeting the expenditure incurred towards repairs of flood damage works. In the maintenance and repair grant allotted for this year, an amount of Rs. 56 lakhs is reserved for meeting the expenditure towards flood damaged works for the entire State. Damages occur during monsoon in all places where the rainfall is heavy, particularly in Malnad areas. Damage reports are being received from Hassan, South Kanara, Coorg Districts. The damaged portions in all such places will be repaired/reconstructed within the funds available or with additional funds whenever required to prevent further damages and also to restore the road to its original condition.

(ii) M. I. Works :—Estimates will be got up and the works will be taken up and completed immediately after the monsoon, out of the funds available.

All efforts will be made to obtain additional funds to meet the expenditure for completing the repair works during this year itself.

ಶ್ರೀ ಕಡಿದಾಳ್ ದಿವಾಕರ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ಜುಲೈ ೧೨ ಮತ್ತು ೧೩ ತಾರೀಖಿನ ಭಾರಿ ಮಳೆ ಆಯಿತು ಎಂದು ಹೇಳಿದ್ದಾರೆ. ಅನಂತರ ಅದಕ್ಕಿಂತ ಹೆಚ್ಚಿನ ಮಳೆ ಎರಡು ಸಾರಿ ಬಂತು. ಒಟ್ಟು ಈ ವರ್ಷದಲ್ಲಿ ಮೂರು ಸಾರಿ ಭಾರಿ ಪ್ರವಾಹಕ್ಕೆ ತೀರ್ಥಹಳ್ಳಿ ಮತ್ತು ಸುತ್ತಮುತ್ತಲಿನ ತಾಲ್ಲೂಕುಗಳು ಒಳಗಾಗಿವೆ. ತೀರ್ಥಹಳ್ಳಿ ಮಾತ್ರವಲ್ಲದೆ ಮಲೆನಾಡಿನ ಇನ್ನಿತರ ಭಾಗಗಳಿಗೂ ತೊಂದರೆಯಾಗಿದೆ. ಆದರೆ ತೀರ್ಥಹಳ್ಳಿಗೆ ಜಾಸ್ತಿ ತೊಂದರೆಯಾಗಿದೆ. ಮಾನ್ಯ ಮಂತ್ರಿಗಳು ರೈನ್‌ಫಾಲ್ ಬಗ್ಗೆ ವಿವರಣೆಗಳನ್ನು ಕೊಟ್ಟಿದ್ದಾರೆ. ಅದರಲ್ಲೂ ತೀರ್ಥಹಳ್ಳಿ ತಾಲ್ಲೂಕಿನಲ್ಲಿ ಹೆಚ್ಚು ಮಳೆಯಾಗಿದೆ ಎಂದು ಹೇಳಿದ್ದಾರೆ. ಇದಲ್ಲದೆ ತುಂಗಾ ನದಿಗೆ ಕಟ್ಟಿರುವ ಅಣಕಟ್ಟಿನ ಕ್ಯಾಚ್‌ಮೆಂಟ್ ಏರಿಯಾದಲ್ಲಿ ಆಗುಂಬೆ, ಶೃಂಗೇರಿ ಭಾಗಗಳಲ್ಲಿ ಇನ್ನೂ ಜಾಸ್ತಿ ತೊಂದರೆಯಾಗಿದೆ. ಅಲ್ಲಿ ಭಾರಿ ಅನಾಹುತವಾಗಿದೆ. ಮಾನ್ಯ ಮಂತ್ರಿಗಳು ಈ ಬಗ್ಗೆ ಕ್ರಮ ತೆಗೆದುಕೊಳ್ಳುವುದಕ್ಕೆ ಇರತಕ್ಕ ಹಣ ಕಡಿಮೆ ಎಂದು ತಿಳಿಸಿದ್ದಾರೆ. ಇಷ್ಟು ಕಡಿಮೆ ಹಣದಲ್ಲಿ

ಎಲ್ಲಾ ಕೆಲಸಗಳನ್ನೂ ಮಾಡುವುದಕ್ಕೆ ಆಗುವುದಿಲ್ಲ. ಆದ್ದರಿಂದ ಸ್ವಲ್ಪ ಹೆಚ್ಚು ಹಣವನ್ನು ಒದಗಿಸಿ ಎಲ್ಲಾ ಕೆಲಸಗಳನ್ನೂ ಮಾಡಿಸಬೇಕಾಗುತ್ತದೆ. ಇದರ ಜೊತೆಗೆ ಶಿವಮೊಗ್ಗದಿಂದ ಮಂಗಳೂರಿನವರೆಗೆ ಸ್ಟೇಟ್ ಹೈವೇ ಇದ್ದು ಆ ಮೂಲಕ ವಾಹನಗಳು ಸಂಚಾರ ಮಾಡಬೇಕು. ಈ ತರಹ ಪ್ರವಾಹ ಬಂದಾಗ ಅಲ್ಲಿ ವಾಹನಗಳಿಗೆ ಬಹಳ ತೊಂದರೆಯಾಗುತ್ತದೆ. ವರ್ಷದಲ್ಲಿ ಒಂದೊಂದು ಸಾರಿ ಪ್ರವಾಹ ಬಂದರೂ ಕೂಡ ಎರಡು ಮೂರು ದಿವಸಗಳ ಕಾಲ ವಾಹನ ಸಂಚಾರಕ್ಕೆ ತೊಂದರೆಯಾಗುತ್ತದೆ. ಮಂಡಗದ್ದೆಯಿಂದ ತೀರ್ಥಹಳ್ಳಿವರೆಗೆ ನಾಲ್ಕೈದು ಕಡೆಗಳಲ್ಲಿ ಎರಡು ಅಡಿಯಿಂದ ೬ ಅಡಿವರೆಗೆ ರಸ್ತೆಯಲ್ಲಿ ನೀರು ಬರುತ್ತದೆ. ಹೀಗಾಗಿ ವಾಹನ ಸಂಚಾರಕ್ಕೆ ಬಹಳ ಅವ್ಯವಸ್ಥೆಯಾಗುತ್ತಿದೆ. ಆದ್ದರಿಂದ ನಾನು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುವುದು ಏನೆಂದರೆ ಇದನ್ನು ತಪ್ಪಿಸಲು ಶಾಶ್ವತವಾದ ಪರಿಹಾರ ಕಾರ್ಯವನ್ನು ತಕ್ಷಣ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ಪರಿಶೀಲನೆ ಮಾಡಬೇಕು ಮತ್ತು ಬಿದ್ದುಹೋಗಿರುವ ಸೇತುವೆಗಳನ್ನು ಕೆರೆ ಕಟ್ಟೆಗಳನ್ನು ರಿಪೇರಿ ಮಾಡಿಸಬೇಕು ಎಂದು ಮುಖ್ಯವಾದ ರಸ್ತೆಗಳು ಬಹಳ ಕೆಳಮಟ್ಟದಲ್ಲಿರುವುದರಿಂದ ನೀರು ಅಲ್ಲಿ ನಿಲ್ಲುವುದಕ್ಕೆ ಅವಕಾಶವಾಗಿದೆ. ಆದ್ದರಿಂದ ಆ ರಸ್ತೆ ಮಟ್ಟವನ್ನು ೫-೬ ಅಡಿ ಹೆಚ್ಚು ಮಾಡಿ ವಾಹನಗಳಿಗೆ ಸಂಚಾರಕ್ಕೆ ಯಾವಾಗಲೂ ತೊಂದರೆಯಾಗದೇ ಇರುವಂಥ ಒಂದು ವ್ಯವಸ್ಥೆಯನ್ನು ಮಾಡುವುದಕ್ಕೆ ಸಾಧ್ಯವೇ ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ —ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರು ಈ ಗಮನ ಸೆಳೆಯುವ ಸೂಚನೆಯನ್ನು ಕಳಿಸಿದ ಮೇಲೆ ಮತ್ತೆ ಫ್ಲಡ್ಸ್ ಬಂದಿದೆ ಎಂದು ಏನು ಹೇಳಿದ್ದಾರೆ ಅದು ಸತ್ಯ ಸಂಗತಿ ಕೂಡ ಹೌದು. ನಾನು ತೀರ್ಥಹಳ್ಳಿಗೆ ಹೋಗಿ ಬಂದಿದ್ದೇನೆ. ಫ್ಲಡ್ ಎಫೆಕ್ಟೆಡ್ ಏರಿಯಾಸ್‌ನ್ನು ನೋಡಿಕೊಂಡು ಬಂದಿದ್ದೇನೆ. ರೋಡ್‌ಗಳಿಗೆ, ಬ್ರಿಡ್ಜ್‌ಗಳಿಗೆ ತುಂಬಾ ಹಾನಿಯುಂಟಾಗಿದೆ ಮತ್ತು ಜಮೀನುಗಳೂ ಹಾಳಾಗಿದೆ ಎನ್ನುವುದನ್ನು ಅಸತ್ಯ ಎಂದು ಸರ್ಕಾರ ಕೂಡ ಹೇಳುತ್ತಾ ಇಲ್ಲ. ತೀರ್ಥಹಳ್ಳಿ ತಾಲ್ಲೂಕಿನ ಬಗ್ಗೆ ಮಳೆ ಪ್ರಮಾಣವನ್ನು ಕೊಟ್ಟಿದ್ದೇನೆ. ಇದನ್ನು ಆಗುಂಬೆಗೆ ಹೋಲಿಸಿದರೆ ಆಗುಂಬೆಯಲ್ಲಿ ಮಳೆ ಜಾಸ್ತಿಯಾಗಿದೆ ಎನ್ನುವುದು ನಿರ್ವಿವಾದ. ಆದುದರಿಂದ ಆ ಕಡೆ ಭಾಗದಲ್ಲಿ ಹೆಚ್ಚಾಗಿ ನಷ್ಟವುಂಟಾಗಿದೆ ಎನ್ನುವುದು ಸರ್ಕಾರದ ಗಮನದಲ್ಲಿದೆ, ಮತ್ತು ಗೊತ್ತಿದೆ. ಮಾನ್ಯ ಸದಸ್ಯರು ರೋಡ್ಸ್, ಬ್ರಿಡ್ಜಸ್ ತುಂಬಾ ಹಾಳಾಗಿದೆ, ಫಂಡ್ಸ್ ಸಾಕಾಗುವುದಿಲ್ಲ, ಜಾಸ್ತಿ ಹಣ ಕೊಡಬೇಕು ಎಂದು ಹೇಳಿದ್ದಾರೆ. ಈ ವಿಷಯ ಸರ್ಕಾರದ ಗಮನದಲ್ಲಿದೆ. ಇದಕ್ಕಾಗಿ ಹೆಚ್ಚು ಹಣವನ್ನು ನಾವು ಹುಡುಕಬೇಕು, ಇದಕ್ಕೆ ಜಾಸ್ತಿ ಹಣವನ್ನು ಮಂಜೂರು ಮಾಡಬೇಕಾಗಿದೆ, ಈ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳಬೇಕಾಗಿದೆ. ನಷ್ಟವುಂಟಾಗಿರತಕ್ಕ ಬ್ರಿಡ್ಜಸ್ ಮತ್ತು ರೋಡ್ಸ್ ಏನಿದೆ ಇವೆಲ್ಲವೂ ಕೂಡ ರಿಪೇರಿ ಮಾಡತಕ್ಕಂಥಾವುಗಳೇ. ಕೆಲವನ್ನು ಹೊಸದಾಗಿ ಕಟ್ಟಬೇಕಾಗುತ್ತದೆ, ಆಯಾ ಕೆಲಸಕ್ಕೆ ತಕ್ಕಂತೆ ಸರ್ಕಾರ ಕಾರ್ಯಕ್ರಮವನ್ನು ಹಾಕುತ್ತದೆ. ಪ್ರವಾಹ ಜಾಸ್ತಿ ಬಂದು ಒಂದೆರಡು ಮೂರು ದಿವಸ ನೀರು ನಿಲ್ಲುತ್ತದೆ ಎಂದು ಮಾನ್ಯ ಸದಸ್ಯರು ಏನು ಹೇಳಿದ್ದಾರೆ ಮತ್ತು ಶಿವಮೊಗ್ಗ ಮಂಗಳೂರು ರೋಡಿನ ಬಗ್ಗೆ ಏನು ಹೇಳಿದ್ದಾರೆ ಅದು ನಿಜ ನಾನು ನೋಡಿಕೊಂಡು ಬಂದಿದ್ದೇನೆ. ಪ್ರವಾಹ ಬಂದಾಗ ನಾಲ್ಕೈದು ದಿವಸ ಮೈನ್ ರೋಡ್‌ನಲ್ಲಿ ನೀರು ನಿಂತು ವಾಹನ ಸಂಚಾರಕ್ಕೆ ದಕ್ಕೆಯುಂಟಾಗುತ್ತದೆ. ಅಲ್ಲಿ ಕಲ್ಲು ಹಾಕಿ ರೆಡ್ ಮಾರ್ಕ್ ಮಾಡಿ ಇಟ್ಟಿದ್ದಾರೆ. ಇದರ ಬಗ್ಗೆ ನಾನು ಈಗಾಗಲೇ ಚರ್ಚೆ ನಡೆಸಿದ್ದೇನೆ. ಇದರ ಬಗ್ಗೆ ಆದೇಶವನ್ನೂ ಕೂಡ ಕೊಡಲೇ ಕೊಡುವಷನಿದ್ದೇನೆ. ಪ್ರತಿ ವರ್ಷವೂ ಕೂಡ ಈ ರೀತಿ ಮಳೆ ಬಂದಾಗ ಆಗುತ್ತಾ ಇರುತ್ತದೆ. ಅಲ್ಲಿ ರೋಡನ್ನು ಎತ್ತರಕ್ಕೆ ಕಾರ್ಯಕ್ರಮವನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಎಲ್. ಟಿ. ತಿಮ್ಮಪ್ಪ ಹೆಗ್ಗಡೆ —ಮಾನ್ಯ ಅಧ್ಯಕ್ಷರೇ, ಮಾನ್ಯ ಮಿತ್ರರು ಅಲ್ಲಿ ಮಳೆ ಬಂದು ಹೆಚ್ಚಿನ ತೊಂದರೆಯಾಗಿರುವುದನ್ನು ಹೇಳಿದ್ದಾರೆ ಮಾನ್ಯ ಮಂತ್ರಿಗಳು ಇದನ್ನು ಗಮನಿಸಿದ್ದಾರೆ ಸಂತೋಷ. ಇದರ ಬಗ್ಗೆ ಏನು ಕಾರ್ಯಕ್ರಮ ತೆಗೆದುಕೊಂಡಿದ್ದಾರೆ ಎನ್ನುವುದನ್ನು ಹೇಳಿದ್ದಾರೆ. ಆದರೆ ಒಂದು ವಿಷಯದಲ್ಲಿ ನಿಗಾ ವಹಿಸಬೇಕಾಗಿದೆ. ಮುರಿದುಹೋಗಿದ್ದಂಥ ಬ್ರಿಡ್ಜ್‌ನ್ನು ೨ ದಿವಸದಲ್ಲಿ ರಿಪೇರಿ ಮಾಡಿ ವಾಹನ ಸೌಕರ್ಯಕ್ಕೆ ಅವಕಾಶ ಮಾಡಿಕೊಟ್ಟಿದ್ದಾರೆ. ಈಗ ನಾನು ಹೇಳುವುದೇನೆಂದರೆ, ನಮ್ಮ ತಾಲ್ಲೂಕಿನಲ್ಲಿರುವ ಒಂದು ಹೋಬಳಿಯಲ್ಲಿ ಸಂಪೂರ್ಣವಾಗಿ ಹೊರಗಡೆ ಸಂಪರ್ಕವನ್ನು ಕಳೆದುಕೊಂಡಿದೆ. ಆ ಒಂದು ಪ್ರದೇಶದ ಜನ ಶರಾವತಿ ಮುಳುಗಡೆಯಿಂದ ನೊಂದಂಥ ಜನ. ಅಲ್ಲಿ ೧೦,೦೦೦ ಜನ ೩೦-೪೦ ಮೈಲಿ ನಡೆದುಕೊಂಡು ಬರತಕ್ಕ ಸ್ಥಿತಿಯಲ್ಲಿ ಸಾರಿಗೆ ಸಂಪರ್ಕ ಕಡಿದುಹೋಗಿದೆ. ಅಲ್ಲಿ ಒಂದ ತಿಂಗಳಾದರೂ ಬ್ರಿಡ್ಜನ್ನು ರಿಪೇರಿ ಮಾಡಿಕೊಟ್ಟಿಲ್ಲ ರಿಪೇರಿ ಮಾಡುವಂಥ ಕೆಲಸ

ನಡೆಯುತ್ತಾ ಇದೆ ಎಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ, ಅದನ್ನು ಆದಷ್ಟು ಜಾಗ್ರತೆ ಮಾಡಬೇಕು ಎಂದು ಹೇಳುತ್ತೇನೆ. ಇನ್ನೊಂದು ಕಡೆ ಲೋಂಚಿನ ವ್ಯವಸ್ಥೆ ಸರಿಯಾಗಿಲ್ಲ, ಕುಸಿದು ಬಿದ್ದಿದೆ. ಜನರು ೩೦-೪೦ ಮೈಲಿ ದೂರ ನಡೆದುಕೊಂಡು ಬರುತ್ತಿದ್ದಾರೆ. ಇದರ ಬಗ್ಗೆ ಸರಿಯಾದ ವ್ಯವಸ್ಥೆಯಾಗಬೇಕು. ಆಮೇಲೆ ಹೊಸನಗರ ಸಂಪರ್ಕ ಕೊಡಲಿಕ್ಕೆ ಬರುತ್ತದೆ ಈ ವರ್ಷ ಪ್ರವಾಹದ ತೊಂದರೆಗೆ ಒಳಗಾಗಿ ರಸ್ತೆ ಸೌಕರ್ಯಕ್ಕೆ ಬಹಳ ತೊಂದರೆಯುಂಟಾಗಿದೆ ಆದುದರಿಂದ ಇದರ ಬಗ್ಗೆ ಸರಿಯಾದ ವ್ಯವಸ್ಥೆಯನ್ನು ಮಾಡಿಕೊಡಬೇಕೆಂದು ಒತ್ತಾಯ ಮಾಡುತ್ತೇನೆ. ಸೊರಬ ರೋಡಿನಲ್ಲಿರತಕ್ಕ ಬ್ರಿಡ್ಜ್ ಹಳೆಯದಾಗಿದ್ದು ಬಿದ್ದುಹೋಗುವ ಸ್ಥಿತಿಯಲ್ಲಿದೆ. ಇದರ ಕಡೆ ಕೂಡ ಗಮನ ಕೊಡಬೇಕು ಎಂದು ಮಾನ್ಯ ಮಂತ್ರಿಗಳನ್ನು ಒತ್ತಾಯಿಸುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಅಧ್ಯಕ್ಷರೇ, ಮಾನ್ಯ ಸದಸ್ಯರು ೨ ಪ್ರಶ್ನೆಗಳನ್ನು ಕೇಳಿದ್ದಾರೆ. ಶರಾವತಿ ಹೈಡ್ರೊ ಎಲೆಕ್ಟ್ರಿಕ್ ಪ್ರಾಜೆಕ್ಟ್‌ನಿಂದ ಮುಳುಗಡೆಯಾಗಿರತಕ್ಕ ಹೋಬಳಿ ಜನರ ಕಷ್ಟವನ್ನು ಕುರಿತು ಪ್ರಸ್ತಾಪ ಮಾಡಿದ್ದಾರೆ. ಅದು ಸತ್ಯ ಸಂಗತಿ. ಮಾನ್ಯ ಸದಸ್ಯರು ಲೋಂಚಿನ ವ್ಯವಸ್ಥೆ ಸರಿಯಾಗಿಲ್ಲ, ಈಗಿರತಕ್ಕ ರಸ್ತೆ ಸಂಪರ್ಕ ಸಾಧನ ಸರಿಯಾಗಿಲ್ಲ ಎಂದು ಹೇಳಿದ್ದಾರೆ, ಈ ವಿಷಯ ಸರ್ಕಾರದ ಗಮನದಲ್ಲಿದೆ. ನಾವು ಒಂದು ಸಾರಿ ಹೋಗಿ ಬರಬೇಕು ಎಂದು ಮಾನ್ಯ ಸದಸ್ಯರೂ ನಾನು ಮಾತನಾಡಿದ್ದೇವೆ. ಹೊಸನಗರ ಭಾಗಕ್ಕೆ ಏನಾದರೂ ಸಂಪರ್ಕ ಕೊಡತಕ್ಕ ಬಗ್ಗೆ ಹೇಳಿದ್ದಾರೆ. ಹೊಸನಗರಕ್ಕೆ ಸಂಪರ್ಕ ಕೊಡುವುದಕ್ಕೆ ಸಾಧ್ಯವಾದರೆ ಆದನ್ನು ವಿಚಾರ ಮಾಡುತ್ತೇನೆ. ಮತ್ತೆ ಸೊರಬ ತಾಲ್ಲೂಕಿನ ಅಂದರೆ ನನ್ನ ತಾಲ್ಲೂಕಿನ ಬ್ರಿಡ್ಜ್ ಬಗ್ಗೆ ಪ್ರಸ್ತಾಪ ಮಾಡಿದ್ದಾರೆ. ಇದರ ಬಗ್ಗೆ ಗಮನಕೊಟ್ಟು ಯಾವ ರೀತಿ ಕಾರ್ಯಕ್ರಮ ತೆಗೆದುಕೊಳ್ಳಬೇಕೋ ಆದನ್ನು ಆದಷ್ಟು ಜಾಗ್ರತೆ ತೆಗೆದುಕೊಳ್ಳುತ್ತೇನೆ.

SRI S. M. SHERNALY CHANDRASEKHAR.—Please permit me to seek clarification because this pertains to the entire district.

MR SPEAKER.—The hon'ble member must know the rules. I request him to uphold the conventions followed.

SRI S. M. SHERNALY CHANDRASEKHAR.—I am the last person to break the conventions.

MR. SPEAKER.—The hon'ble member must not insist like this. There are different opportunities he can avail of. By insisting like this, has breaking the convention and dishonouring the convention.

SRI B. BASAVALINGAPPA.—You can kindly make an exception in his case.

ಶ್ರೀ ಜೆ. ಎಚ್. ಪಟೀಲ್.—ತಾವು ಹೇಳಿದ ಪ್ರಕಾರ ಯಾರ ಹೆಸರು ಇರುತ್ತದೋ ಆವರಿಗೆ ವಿವರಣೆ ಕೇಳುವುದಕ್ಕೆ ಅವಕಾಶ ಮಾಡಿಕೊಡಿ ಇಲ್ಲದೇ ಇದ್ದರೆ ಎಲ್ಲರಿಗೂ ಅವಕಾಶ ಮಾಡಿಕೊಡಿ.

MR. SPEAKER.—The Hon'ble Minister was pleased to say that he may be given an opportunity. We have to adopt one system. I would like as far as possible to follow parliamentary conventions. Hon'ble Members who have sent calling attention notice can only seek clarifications.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ನಾನು ಭಾಷಣ ಮಾಡುವುದಿಲ್ಲ, ಒಂದೇ ಒಂದು ವಿವರಣೆ ಕೇಳುತ್ತೇನೆ, ಅದಕ್ಕೆ ಅನುಮತಿ ಕೊಡಿ.

ಅಧ್ಯಕ್ಷರು —ತಾವು ಪ್ರತಿಯೊಂದಕ್ಕೂ ಎದ್ದೆದ್ದು ನಿಂತುಕೊಳ್ಳುತ್ತೀರಿ, ನಾನು ನೋಡಿದ್ದೇನೆ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಆ ಕಡೆಯ ಸ್ನೇಹಿತರು ನಿನ್ನೆಯೂ ಸಹ ಕನ್‌ವೆನ್‌ಷನ್ ಬ್ರೇಕ್ ಅಫ್ ಮಾಡಿದ್ದಾರೆ.

ಅಧ್ಯಕ್ಷರು.—ನೋಡಿ ಜಿಲ್ಲೆಯವರೆಲ್ಲಾ ಮಾತನಾಡಬೇಕು ಎಂದರೆ ೮–೧೦ ಜನರೆಲ್ಲಾ ಮಾತನಾಡಿ ನನ್ನದೇನೂ ಅಭ್ಯಂತರ ಇಲ್ಲ. ಆದರೆ ತಾವು ಹೆಲ್ತ್ ಕನ್‌ವೆನ್‌ಷನ್ ಬಿಟ್ಟು ಹೋಗಬಾರದು. ಈ ಸಭೆಯ ಅಮೂಲ್ಯವಾದ ವೇಳೆಯನ್ನು ಪೋಲು ಮಾಡುವುದು ಬೇಡ. ಗಮನ ಸೆಳೆಯುವ ಸೂಚನೆಯ ಪ್ರಶ್ನೆಗೆ ಯಾರು ಯಾರು ಸಹಿ ಹಾಕಿರುತ್ತಾರೋ ಅವರಿಗೆ ಮಾತ್ರ ವಿವರಣೆ ಕೇಳುವ ಅವಕಾಶ ಕೊಡುವ ಒಂದು ಸಂಪ್ರದಾಯವಿದೆ ಆದರೆ ಅದು ಇಡೀ ಜಿಲ್ಲೆಗೆ ಸಂಬಂಧಪಟ್ಟಿದ್ದು ಎಂದು ಸಹಿ ಮಾಡದೇ ಇರುವವರಿಗೂ ಎಲ್ಲರಿಗೂ ಅವಕಾಶ ಮಾಡಿಕೊಡಬೇಕೆಂದು ಹೇಳಿದರೆ ಆಗುವುದಿಲ್ಲ. ಈ ಸಭೆಯ ವೇಳೆ ಬಹಳ ಅಮೂಲ್ಯವಾದದ್ದು ಒಂದು ದಿವಸಕ್ಕೆ ಒಂದು ಘಂಟೆಗೆ ಎಷ್ಟು ಖರ್ಚಾಗುತ್ತದೆಂಬುದನ್ನು ಬೇಕಾದರೆ ತಮಗೆ ಕೊನೆಯ ದಿವಸ ಹೇಳುತ್ತೇನೆ. ತಾವು ಹೀಗೆ ಮಾಡಿದರೆ ಸರ್ಕಾರಿ ಕೆಲಸವೂ ಸಹ ಸುಗಮವಾಗಿ ನಡೆಯುವುದಿಲ್ಲ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ತಾವು ನನಗೆ ಒಂದೇ ಒಂದು ವಿವರಣೆ ಕೇಳುವುದಕ್ಕೆ ಅವಕಾಶ ಮಾಡಿಕೊಡಿ.

ಶ್ರೀ ವಿ. ಎಂ. ಘಾಡಿ.—ಆ ಕಡೆಯ ಸ್ನೇಹಿತರು ನನ್ನೆ ಕೂಡ ಕನ್‌ವೆನ್‌ಷನ್ ಬ್ರೇಕ್ ಅಪ್ ಮಾಡಿದ್ದಾರೆ. ಇದರ ಬಗ್ಗೆ ತಾವು ಹಿಂದೆ ಸಹ ರೂಲಿಂಗ್ ಕೊಟ್ಟಿದ್ದೀರಿ.

(ಇಬ್ಬರು ಮೂವರು ಸದಸ್ಯರುಗಳು ಎದ್ದು ಮಾತನಾಡಲು ಶುರು ಮಾಡಿದರು)

ಅಧ್ಯಕ್ಷರು.—ತಾವೆಲ್ಲಾ ಇದರ ಬಗ್ಗೆಯೇ ಚರ್ಚೆ ಮಾಡೋಣವೆಂದರೆ ಇದರ ಬಗ್ಗೆಯೇ ಚರ್ಚೆ ಮಾಡೋಣ; ನನ್ನದೇನೂ ಅಭ್ಯಂತರವಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ —ಸ್ವಾಮಿ ನನ್ನದೊಂದು ಕ್ರಿಯಾಲೋಪ, ಏನೆಂದರೆ ಈ ವಿಷಯದ ಬಗ್ಗೆ ೧೦ ನಿಮಿಷದಿಂದ ಚರ್ಚೆಯಲ್ಲಿ ನಡೆಯುತ್ತಿದೆ. ಸಾಮಾನ್ಯವಾಗಿ ಯಾರು ಗಮನ ಸೆಳೆಯುವ ಪ್ರಶ್ನೆಗೆ ಸಹಿ ಹಾಕಿರುತ್ತಾರೋ ಅವರು ಮಾತ್ರ ಕ್ಲಾರಿಫಿಕೇಷನ್ ಕೇಳುವುದಕ್ಕೆ ಒಂದು ಅವಕಾಶವಿದೆ ಆ ರೀತಿಯಾಗಿ ನಡೆದುಕೊಂಡು ಬಂದಿರುವ ಪದ್ಧತಿ ಇದೆ. ಒಂದು ವೇಳೆ ಅದು ಅಷ್ಟು ಮಹತ್ವದ ಪ್ರಶ್ನೆಯಾಗಿದ್ದರೆ ತಾವು ಅಪ್ಪಣೆ ಕೊಡಿಸಿದಲ್ಲಿ ಮಾತ್ರ ಇತರ ಸದಸ್ಯರು ಪ್ರಶ್ನೆ ಕೇಳುವುದಕ್ಕೆ ಅವಕಾಶವಿದೆ ಅದು ತಮಗೆ ಬಿಟ್ಟಿದ್ದು. ತಮ್ಮನ್ನು ಪ್ರಶ್ನೆ ಮಾಡುವ ಹಾಗಿಲ್ಲ. ಈ ರೀತಿ ಸಮಯವನ್ನು ಈಗ ಮಾನ್ಯ ಸದಸ್ಯರು ಕಳೆಯುವುದು ಸರಿಯಲ್ಲ. ತಮ್ಮ ಅಪ್ಪಣೆಗೆ ಎಲ್ಲರೂ ತಲೇ ಬಾಗಲೇ ಬೇಕು.

ಅಧ್ಯಕ್ಷರು.—ನಾನು ಇಲ್ಲಿ ನಿಷ್ಪಕ್ಷಪಾತವಾದ ನೀತಿಯನ್ನೇ ಅನುಸರಿಸುತ್ತಿದ್ದೇನೆ, ತಮಗೆ ಅವಕಾಶ ಮಾಡಿಕೊಟ್ಟರೆ ನಾಳೆ ಮತ್ತೊಬ್ಬರಿಗೆ ಅವಕಾಶ ಮಾಡಿಕೊಡಬೇಕಾಗುತ್ತದೆ. ಆದುದರಿಂದ ತಾವು ಆ ರೀತಿ ಒತ್ತಾಯಮಾಡಿ ಕೇಳುವುದು ಸರಿಯಲ್ಲ. ಈ ರೀತಿ ನಾವು ಕಾಲ ಕಳೆದರೆ ಬಹಳ ಕಷ್ಟವಾಗುತ್ತದೆ. ಒಂದು ಜಿಲ್ಲೆಯಿಂದ ಬರತಕ್ಕಂಥ ೮–೧೦ ಜನ ಸದಸ್ಯರೆಲ್ಲರಿಗೂ ಅವಕಾಶ ಮಾಡಿಕೊಡಿ ಎಂದರೆ ಹೇಗೆ ಸಾಧ್ಯ?

ಶ್ರೀ ಜೆ. ಎಚ್. ಪಟೇಲ್.—ಇದು ಶಿವಮೊಗ್ಗ ಜಿಲ್ಲೆಯ ಅತ್ಯಂತ ಮಹತ್ವದ ಪ್ರಶ್ನೆಯಾಗಿರುವುದರಿಂದ ಇವತ್ತು ಮಾತ್ರ ಅವಕಾಶ ಮಾಡಿಕೊಡಿ.

ಶ್ರೀ ಜಿ. ಬಿ. ಶಂಕರ್‌ರಾವ್.—ಸ್ವಾಮಿ, ನಾನು ಈ ಸದನದಲ್ಲಿ ೨೦ ವರ್ಷಗಳಿಂದಲೂ ನೋಡುತ್ತಿದ್ದೇನೆ. ಕಾಲಿಂಗ್ ಅಟೆನ್‌ಷನ್‌ಗೆ ಸಹಿ ಮಾಡಿದವರು ಮಾತ್ರ ವಿವರಣೆ ಕೇಳುವುದಕ್ಕೆ ಅವಕಾಶ ಇದೆಯೇ ವಿನಾ ಬಾಕಿಯವರಿಗೆ ಆ ಅವಕಾಶವಿಲ್ಲ ಆ ಒಂದು ಹೆಲ್ತ್ ಕನ್‌ವೆನ್‌ಷನ್‌ನನ್ನು ನಾವು ಬೆಳೆಸಿಕೊಂಡು ಬಂದಿದ್ದೇವೆ. ಆದರಂತೆ ನಡೆದುಕೊಂಡು ಹೋಗುವುದು ಒಳ್ಳೆಯದು, ಹೊಸದಾಗಿ ನಾವು ಆ ಹೆಲ್ತ್ ಕನ್‌ವೆನ್‌ಷನ್‌ನನ್ನು ಬ್ರೇಕ್ ಅಪ್ ಮಾಡುವುದು ಬೇಡ.

ಅಧ್ಯಕ್ಷರು.—ಈ ಮನೆಯಲ್ಲಿ ಮಾನ್ಯ ಸದಸ್ಯರಿಗೆ ದೊರೆಯುವ ಸಂಪೂರ್ಣ ಸೌಲಭ್ಯವನ್ನು ಒದಗಿಸಿ ಕೊಡಲು ನಾನು ಸಹ ಪ್ರಯತ್ನಿಸುತ್ತೇನೆ ಅದಕ್ಕೆ ಮಾನ್ಯ ಸದಸ್ಯರೂ ಸಹ ನನಗೆ ಸಹಕಾರ ನೀಡಬೇಕು ಆದರೆ ಈ ರೀತಿ ಒತ್ತಾಯ ಮಾಡಬಾರದು. ಮಾನ್ಯ ಶ್ರೀ ಶೀರ್ನಾಳಿ ಚಂದ್ರಶೇಖರ್‌ರವರೇ ನಿಮ್ಮ ಪ್ರಶ್ನೆಯನ್ನು ನೇರವಾಗಿ ಕೇಳಿಬಿಡಿ.

ಶ್ರೀ ಎಸ್. ಎಂ. ಶೀರ್ನಾಳಿ ಚಂದ್ರಶೇಖರ್.—ಮಾನ್ಯ ಮಂತ್ರಿಗಳವರು ಉತ್ತರದಲ್ಲಿ ತೀರ್ಥಹಳ್ಳಿ, ಸಾಗರ ಮಾತ್ರ ಎಂದು ಹೇಳಿದ್ದಾರೆ ಆದರೆ ಹೊಸನಗರ ಮತ್ತು ಇತರ ಮಲೆನಾಡು ಇರತಕ್ಕಂಥ ಪ್ರದೇಶದಲ್ಲಿ ಲುಕ್ಸಾನು ಆಗಿದೆ. ಇದರ ವಿವರಣೆಯನ್ನು ಏನಾದರೂ ಮಾನ್ಯ ಮಂತ್ರಿಗಳವರು ಕೊಡುವುದಕ್ಕೆ ಆಗುತ್ತದೆಯೇ ? ಅಲ್ಲಿರುವ ಬ್ರಿಡ್ಜ್‌ಗಳನ್ನು ಸಹ ಏನಾದರೂ ರಿಪೇರಿ ಮಾಡಿಸುವುದಕ್ಕೆ ವ್ಯವಸ್ಥೆ ಮಾಡಿಸುತ್ತೀರಾ ಹೇಗೆ ಎಂಬುದನ್ನು ತಿಳಿಸುತ್ತೀರಾ ?

ಶ್ರೀ ಕೆ. ಯಂಕಟಪ್ಪ.—ಸ್ವಾಮಿ, ನಾನು ಈ ಪ್ರಶ್ನೆಯನ್ನು ಕೇಳುವುದಕ್ಕೆ ಇಷ್ಟಪಡುತ್ತಿಲ್ಲ. ಕಾರಣ ಮಾನ್ಯ ವಿರೋಧ ಪಕ್ಷದ ನಾಯಕರು ಮತ್ತಿತರ ಸದಸ್ಯರುಗಳು ಅನ್ ಹೆಲ್ತಿ ಕನ್‌ವೆನ್‌ಷನ್ ಹಾಕಬಾರದೆಂದು ಹೇಳಿದರು.....

(ಮಾನ್ಯ ಶ್ರೀ ಶಂಕರ್‌ರಾವ್‌ರವರು ಮಾತನಾಡಲು ಎದ್ದು ನಿಂತರು.)

ಅಧ್ಯಕ್ಷರು—ಮಾನ್ಯ ಸದಸ್ಯರು ತಾವು ಹೇಳಿದ್ದನ್ನು ಅವರೇನು ಅರ್ಥ ಮಾಡಿಕೊಂಡರೋ ಅವರಿಗೇ ಗೊತ್ತು ತಾವು ದಯವಿಟ್ಟು ಕುಳಿತುಕೊಳ್ಳಿ.

ಶ್ರೀ ಕೆ. ಯಂಕಟಪ್ಪ—ಎರಡು ಡ್ಯಾಮ್ ಡ್ಯಾಮೇಜ್ ಆಗಿದೆಯೆಂದು ಹೇಳಿದ್ದೀರಿ. ಅದಕ್ಕೆ ಮಳೆಗಾಲ ಮುಗಿದ ಮೇಲೆ ಅಲ್ಲಿ ಕೆಲಸ ಕಾರ್ಯಗಳನ್ನು ತೆಗೆದುಕೊಳ್ಳುತ್ತೇವೆಂದು ಹೇಳಿದ್ದೀರಿ. ಆದರೆ ಈಗ ಅದು ಒಡೆದು ಹೋಗಿ ನೀರು ಸೋರಿ ಹೋಗದ ಹಾಗೆ ಏನಾದರೂ ಇಲಾಖೆಯವರು ವ್ಯವಸ್ಥೆ ಮಾಡುವುದಕ್ಕೆ ನಿದರ್ಶನ ಕೊಡುತ್ತೀರಾ ?

ಶ್ರೀ ಜೆ. ಎಚ್. ಪಟೇಲ್—ಸ್ವಾಮಿ, ಶಿವಮೊಗ್ಗ ಜಿಲ್ಲೆಯಲ್ಲಿ ಮಲೆನಾಡು ಒಂದು ಭಾಗವಿದ್ದರೆ ಮತ್ತೊಂದುಕಡೆ ಬಯಲು ಸೀಮೆ ಇದೆ. ಅಲ್ಲಿ ನೀರಾವರಿ ಕಾಲುವೆ ರಸ್ತೆಗಳನ್ನು ಮಾಡಲು ಏನಾದರೂ ಆದ್ಯತೆ ಇಟ್ಟಿದ್ದೀರಾ ? ಮತ್ತು ಚನ್ನಗಿರಿ ತಾಲ್ಲೂಕಿಗೆ ಈ ವರ್ಷ ೧೨ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ. ೧೨ ಲಕ್ಷ ರೂಪಾಯಿಗಳಿಂದ ಅಷ್ಟು ಕೆಲಸ ಮಾಡುವುದಕ್ಕೆ ಸಾಧ್ಯವೇ ಎಂಬುದನ್ನು ದಯವಿಟ್ಟು ಹೇಳುತ್ತೀರಾ ?

ಶ್ರೀ ಎಸ್. ಬಂಗಾರಪ್ಪ—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಶ್ರೀ ಶೀರ್ನಾಳಿ ಚಂದ್ರಶೇಖರ್ ಹೇಳಿದ ಹಾಗೆ ಶಿವಮೊಗ್ಗ ಜಿಲ್ಲೆಗೆ ಸಂಬಂಧಪಟ್ಟ ಗಮನ ಸೆಳೆಯುವ ಸೂಚನೆ ಇದು. ಇದು ಬರೀ ತೀರ್ಥಹಳ್ಳಿ ಮತ್ತು ಸಾಗರ ತಾಲ್ಲೂಕುಗಳಲ್ಲಿ ಮಾತ್ರವಲ್ಲದೆ ಹೊಸನಗರ ತಾಲ್ಲೂಕಿನಲ್ಲೂ ಕೂಡ ಅತಿವೃಷ್ಟಿಯಿಂದ ಆಗಿರತಕ್ಕ ಅನಾಹುತ ಮತ್ತು ಅದರಿಂದ ಆಗಿರತಕ್ಕ ನಷ್ಟ ವಿವರವನ್ನು ಕೊಡುವುದಕ್ಕೆ ಸಾಧ್ಯವೇ ಎಂದು ಕೇಳಿದ್ದಾರೆ.

೨.೩೦ ಪಿ.ಎಂ.

ಅಲ್ಲಿ ತೀರ್ಥಹಳ್ಳಿ, ಸಾಗರ ಈ ತಾಲ್ಲೂಕುಗಳಿಗೆ ಹೋಲಿಸಿದರೆ ಬೇರೆ ತಾಲ್ಲೂಕುಗಳಲ್ಲಿ ಅಷ್ಟೊಂದು ಅತಿವೃಷ್ಟಿ ಆಗಿಲ್ಲ. ಹೊಸನಗರದಲ್ಲಿ ಸುಮಾರು ನಗರ, ಹೋಬಳಿಗಳು ಮಾನ್ಯ ದಿವಾಕರ್‌ರವರ ಕ್ಷೇತ್ರಕ್ಕೆ ಬರುತ್ತವೆ. ಅತಿವೃಷ್ಟಿಯಿಂದಾಗಿ ಈ ನಗರ, ಹೋಬಳಿಗಳ ಕೆಲವು ಕಡೆಗಳಲಿ ನಷ್ಟ ಉಂಟಾಗಿದೆ ಎಂದು ಅದು ಸರ್ಕಾರದವರ ಗಮನಕ್ಕೆ ಬಂದಿದೆ. ಹೊಸನಗರದಲ್ಲಿ ಆಗಿರತಕ್ಕಂಥ ಅತಿವೃಷ್ಟಿಯನ್ನು ಬಿಟ್ಟು ಉಳಿದ ಕಡೆಗಳಲ್ಲಿ ಆದಂಥ ಅತಿವೃಷ್ಟಿ ಅದು ಸರ್ಕಾರದ ಗಮನಕ್ಕೆ ಬಂದಿಲ್ಲ. ಆದೇ ರೀತಿಯಲ್ಲಿ ಸೊರಬ ತಾಲ್ಲೂಕಿನಲ್ಲಿ ಕೆರೆಗಳು ಒಡೆದು ಹೋಗಿದೆ ಮತ್ತು ಶಿಕಾರಿಪುರ ತಾಲ್ಲೂಕಿನಲ್ಲೂ ಕೆಲವು ಕೆರೆಗಳು ಒಡೆದು ಹೋಗಿವೆ. ನನ್ನ ಕ್ಷೇತ್ರವಾದ ಸೊರಬ ತಾಲ್ಲೂಕಿನಲ್ಲಿ ವರದಾನದಿಯ ಪ್ರವಾಹದಿಂದಾಗಿ ಅನೇಕ ಹಳ್ಳಿಗಳು ಮುಳುಗಡೆಯಾಗಿದೆ ಮತ್ತು ೪೦೦ ಎಕರೆಯಷ್ಟು ಜಮೀನು ಸಹ ಮುಳುಗಡೆಯಾಗಿದೆ. ಈ ತರಹ ಹೊಸನಗರದಲ್ಲಿ ಹೆಚ್ಚಾಗಿ ಆಗಿರಬಹುದು ಮತ್ತು ಬೇರೆ ತಾಲ್ಲೂಕುಗಳಲ್ಲೂ ಈ ರೀತಿ ಹೆಚ್ಚಾಗಿ ಆಗಿರಬಹುದು. ಸರ್ಕಾರದವರು ಈ ಬಗ್ಗೆ ಯಾವ ರೀತಿಯ ಕಾರ್ಯಕ್ರಮವನ್ನು ತೆಗೆದುಕೊಳ್ಳಬೇಕೆಂದು ವಿಚಾರ ಮಾಡುತ್ತಿದ್ದಾರೆ. ಮಾನ್ಯ ಸದಸ್ಯರಾದ ವೆಂಕಟಪ್ಪನವರು ಶಿಕಾರಿಪುರ ತಾಲ್ಲೂಕಿನಲ್ಲಿ ಒಡೆದು ಹೋಗಿರತಕ್ಕಂಥ ಕೆರೆಗಳ ದುರಸ್ತಿ ಕಾರ್ಯಕ್ಕಾಗಿ ಹೆಚ್ಚಿನ ಹಣವನ್ನು ಕೊಡುವುದಕ್ಕೆ ಸಾಧ್ಯವೇ ಎಂದು ಕೇಳಿದ್ದಾರೆ ; ಅದಲ್ಲದೆ ಅಲ್ಲಿ ಕೆರೆಗಳು ಹೆಚ್ಚಿನ ಸಂಖ್ಯೆಯಲ್ಲಿ ಒಡೆದು ಹೋಗಿದೆ ಎಂದು ಹೇಳಿದ್ದಾರೆ. ಆದರ ಬಗ್ಗೆ ನಾನು ವಿಚಾರ ಮಾಡಿಸುತ್ತೇನೆ. ಅಲ್ಲಿ ಜಾಸ್ತಿ ಕೆರೆಗಳು ಒಡೆದು ಹೋಗಿದ್ದರೆ, ತಕ್ಷಣ ಅವುಗಳನ್ನೆಲ್ಲಾ ಸರಿಪಡಿಸುವುದಕ್ಕೆ ಏನೇನು ಕಾರ್ಯಕ್ರಮಗಳನ್ನು ತೆಗೆದು

ಕೊಳ್ಳಬೇಕೋ ಆ ಕಾರ್ಯಕ್ರಮಗಳನ್ನೆಲ್ಲಾ ನಾವು ತೆಗೆದುಕೊಳ್ಳುತ್ತೇವೆ. ಆಮೇಲೆ ಮಾನ್ಯ ಸದಸ್ಯರಾದ ಜೆ. ಹೆಚ್. ಪಟೇಲ್‌ರವರು ಕೇಳಿರತಕ್ಕಂಥ ಪ್ರಶ್ನೆ ಗಮನ ಸೆಳೆಯುವ ಸೂಚನೆಗೆ ಸಂಬಂಧಪಡುವುದಿಲ್ಲ. ಹಿಂದೆ ನಾನು ಉತ್ತರ ಕೊಡತಕ್ಕಂಥ ಕಾಲದಲ್ಲಿ ಭದ್ರಾ ಇರಿಗೇಟೆಡ್ ಏರಿಯಾದಲ್ಲಿ ಇದು ಬರುವುದರಿಂದ ರಸ್ತೆಗಳೆಲ್ಲಾ ಹಾಳಾಗಿದೆ ಎಂದು ಹೇಳಿದ್ದೇನೆ ಮತ್ತು ಇದರ ಬಗ್ಗೆ ಕೂಡ ನಾವು ಗಮನ ಹರಿಸಿದ್ದೇವೆ ಎಂದು ಹೇಳಿದ್ದೇನೆ. ಅದೂ ಅಲ್ಲದೆ ಅವರು ಚನ್ನಗಿರಿ ತಾಲ್ಲೂಕಿನಲ್ಲಿ ಈ ರಸ್ತೆ ದುರಸ್ತಿ ಕಾರ್ಯಕ್ಕಾಗಿ ೧೨ ಲಕ್ಷ ರೂಪಾಯಿಗಳನ್ನು ಇಟ್ಟಿದ್ದೀರಿ, ಇದು ಸಾಲುವುದಿಲ್ಲ ಎಂದು ಹೇಳಿದ್ದಾರೆ. ಈ ವಿಷಯ ಗಮನ ಸೆಳೆಯುವ ಸೂಚನೆಯಲ್ಲಿ ಬರುವುದಿಲ್ಲ. ಅದು ಪ್ರತ್ಯೇಕ ವಿಷಯವಾಗುತ್ತದೆ. ನಾನು ಹಿಂದೆ ಉತ್ತರ ಕೊಡುವಾಗ ಈ ಚನ್ನಗಿರಿ ತಾಲ್ಲೂಕಿನಲ್ಲಿ ಇರತಕ್ಕಂಥ ಪರಿಸ್ಥಿತಿ ಇಡೀ ಕರ್ನಾಟಕ ರಾಜ್ಯದಲ್ಲಿ ಇದೆಯೆಂದು ತಿಳಿಸಿದ್ದೇನೆ. ಆದ್ದರಿಂದ ಈ ಬಗ್ಗೆ ಪ್ರತ್ಯೇಕವಾಗಿ ಮಾತುಕತೆ ನಡೆಸಿ ಎಷ್ಟು ಹಣವನ್ನು ಕೊಡಬೇಕೆಂಬ ಬಗ್ಗೆ ನಾವು ಯೋಜನೆ ಮಾಡುತ್ತೇವೆ.

ಶ್ರೀ ಜೆ. ಎಚ್. ಪಟೇಲ್—ಈ ಬಗ್ಗೆ ಉತ್ತರ ಆಮೇಲೆ ಕೊಡಿ, ಹಣವನ್ನು ಈಗ ಕೊಡಿ.

ಶ್ರೀ ಎಸ್. ಬಂಗಾರಪ್ಪ—ನಾನು ಅರ್ಜೆಂಟಾಗಿ ಉತ್ತರ ಆ ರೀತಿ ಕೊಡಬಲ್ಲೆ ಮತ್ತು ಹಣವನ್ನು ಲೇಟಾಗಿ ಕೊಡಬಲ್ಲೆ

(*ii*) *re: Collection of land revenue at higher rates in Periyapatna taluk.*

SRI K.S. KALAMARI GOWDA(Periyapatna)—I call the attentation of the Minister for Revenue to the collection of land revenue at higher rates in Periyapatna Taluk.

ಶ್ರೀ ಬಿ. ಬಸವಲಿಂಗಪ್ಪ (ಕಂದಾಯ ಶಾಖೆಯ ಮಂತ್ರಿಗಳು)—ಸ್ವಾಮಿ, ನನ್ನ ಹೇಳಿಕೆ ಈ ರೀತಿ ಇದೆ.

ಕರ್ನಾಟಕ ರಾಜ್ಯದ ಎಲ್ಲಾ ತಾಲ್ಲೂಕುಗಳಲ್ಲಿಯೂ ಕಂದಾಯ ವ್ಯವಸ್ಥೆಯ ಅಪಧಿಯು ಮುಗಿದು ಹೋಗಿದ್ದು ಅದರ ಪರಿಷ್ಕರಣವು ಆಗಬೇಕಾಗಿದ್ದುದರಿಂದ ಒಟ್ಟು ೧೭೫ ತಾಲ್ಲೂಕುಗಳ ಪೈಕಿ ೧೭೨ ತಾಲ್ಲೂಕುಗಳ ಕಂದಾಯ ವ್ಯವಸ್ಥೆಯ ಪರಿಷ್ಕರಣ ಕಾರ್ಯವನ್ನು ೧ನೇ ಜುಲೈ ೧೯೬೫ ರಂದು ಜಾರಿಗೆ ತರಲಾಯಿತು. ಇನ್ನುಳಿದ ಮೂರು ತಾಲ್ಲೂಕುಗಳಲ್ಲಿ ಅಂದರೆ ಗುಲ್ಬರ್ಗ ವಿಭಾಗದ ದೇವದುರ್ಗ, ರಾಯಚೂರು ಮತ್ತು ಗಂಗಾವತಿ ತಾಲ್ಲೂಕುಗಳಲ್ಲಿ ಕಂದಾಯ ವ್ಯವಸ್ಥೆಯ ಪರಿಷ್ಕರಣ ಕಾರ್ಯವು ಹಾಲಿ ನಡೆಯುತ್ತಾ ಇದೆ. ಸದರಿ ಪರಿಷ್ಕರಣ ಕಾರ್ಯವು ಪಿರ್ಯಾಪಟ್ಟಣ ತಾಲ್ಲೂಕಿನಲ್ಲಿ ೭ನೇ ಮೇ ೧೯೭೦ರಲ್ಲಿ ಪ್ರಾರಂಭವಾಗಿ ೩೧ನೇ ಮಾರ್ಚಿ ೧೯೭೧ರಲ್ಲಿ ಪೂರ್ಣಗೊಂಡಿತು.

ಆದರೆ ೧ನೇ ಜುಲೈ ೧೯೬೫ ರಿಂದ ಹುಣಸೂರು ಮತ್ತು ಪಿರಿಯಾಪಟ್ಟಣ ತಾಲ್ಲೂಕುಗಳಲ್ಲಿ ಜಾರಿಗೆ ಬಂದ ಪರಿಷ್ಕರಣ ದರಗಳ ಬಗ್ಗೆ ಆಕ್ಷೇಪಣೆಗಳು ಬಂದಕಾರಣ ಈ ಪರಿಷ್ಕರಣ ದರಗಳು ಸೂಕ್ತ ತಿದ್ದುಪಡಿಯಾದ ನಂತರ ೧೯೭೬ರಲ್ಲಿ ಅಂತಿಮವಾಗಿ ಒಪ್ಪಲ್ಪಟ್ಟವು. ಈ ರೀತಿ ಸೂಕ್ತ ತಿದ್ದುಪಡಿಗೊಳಲ್ಪಟ್ಟ ಪರಿಷ್ಕರಣ ದರಗಳು ಕಂದಾಯ ವರ್ಷ ೧೯೬೫-೧೯೬೬ರಿಂದ ಅನ್ವಯವಾಗುತ್ತವೆ. ಪಿರಿಯಾಪಟ್ಟಣ ತಾಲ್ಲೂಕಿಗೆ ಸಂಬಂಧಿಸಿದ ಈ ರೀತಿ ತಿದ್ದುಪಡಿಗೆ ಒಳಪಟ್ಟ ಪರಿಷ್ಕರಣ ದರಗಳನ್ನು ಸೂಚಿಸುವ ತಃಖ್ತೆಯನ್ನು ಇದಕ್ಕೆ ಲಗತ್ತಿಸಿದೆ ಇದರಿಂದ ಈ ಎರಡು ತಾಲ್ಲೂಕುಗಳಲ್ಲಿ ಈ ರೀತಿ ಹೆಚ್ಚಿಗೆಯಾದ ಭೂ ಕಂದಾಯ ಎರಡರಷ್ಟಕ್ಕಿಂತ ಜಾಸ್ತಿ ಇಲ್ಲದೆ ಇರುವುದನ್ನು ಕಾಣಬಹುದು. ಆದುದರಿಂದ ಪಿರಿಯಾಪಟ್ಟಣ ತಾಲ್ಲೂಕಿಗೆ ಸಂಬಂಧಪಟ್ಟಂತೆ ಹೆಚ್ಚಿಸಲ್ಪಟ್ಟ ಭೂಕಂದಾಯವನ್ನು ವಜಾ ಮಾಡುವ ಪ್ರಶ್ನೆ ಉದ್ಭವಿಸುವುದಿಲ್ಲ.